# 1. Action Research in relation to other types of research.

*1. For what purpose could different types of research be used in context of a DIET?*

*Write one instance for each of the following.*

*1. Descriptive Study:*

## ವಿವರಣಾತ್ಮಕ ಸಂಶೋಧನೆ:

**ಗುಡ್ ಮತ್ತು ಬಾರ್ ಹಾಗೂ ಸ್ಟೇಟ್ಸ್‌ವರು:** " ಒಬ್ಬ ಉತ್ತಮವಾದ ವೈದ್ಯನು ಹೇಗೆ ಹೊಸ ಹೊಸ ಔಷಧಿಗಳನ್ನು ಕಾಯಿಲೆಗೆ ಕಂಡು ಹಿಡಿಯುತ್ತಾನೋ ಹಾಗೆ ಒಬ್ಬ ಶಿಕ್ಷಣದ ಸಂಶೋಧಕ, ಅಧ್ಯಯನಕಾರ ಸಹ ಎಲ್ಲಿ ಯಾವ ಮಾಹಿತಿ ದೊರಕುತ್ತದೆ ಎಂಬುದನ್ನು ಗುರುತಿಸಿ ಮತ್ತು ಅದನ್ನು ಅಧ್ಯಯನಕ್ಕೆ ಪೂರಕವಾಗಿ ಉಪಯೋಗಿಸಿಕೊಳ್ಳುವ ಜಾಣ್ಮೆಯನ್ನು ಹೊಂದಬೇಕು" ಎಂದಿದ್ದಾರೆ.

ಸಂಶೋಧನಾ ಅಧ್ಯಯನದ ಯಶಸ್ಸು ಸೂಕ್ತವಾದ ಸಂಶೋಧನಾ ಸಮಸ್ಯೆಯ ಆಯ್ಕೆ ಮತ್ತು ಅದನ್ನು ಅನುಸರಿಸುವ ಕ್ರಮದಲ್ಲಿ ಅಡಗಿದೆ. ಸಂಶೋಧಕನು ತನ್ನ ಸಮಸ್ಯೆಯ ಪೂರ್ಣ ಚಿತ್ರಣ ದೊರೆತ ನಂತರ ಸೂಕ್ತವಾದ, ಸಮಸ್ಯೆಗೆ ನಿಖರವಾಗಿರುವ, ವಾಸ್ತವಕತೆಗೆ ಹತ್ತಿರುವಿರುವ ಪರಿಹಾರೋಪಾಯಗಳನ್ನು ಕಂಡುಕೊಂಡು; ಅಧ್ಯಯನದ ಅಡಿಯಲ್ಲಿ ವಿಶ್ಲೇಷಿಸುವುದು ಅತ್ಯಂತ ಸೂಕ್ತವಾದ ವಿಧಾನ. ಇದೇ ಸಂಶೋಧನಾ ವಿಧಾನವಾಗಿರುತ್ತದೆ. ಸಂಶೋಧನೆಯಲ್ಲಿ ವಿವರಿಸಿರುವ ವಿಷಯ ಯಾವ ಮಾದರಿ ಎಂಬುದನ್ನು ಆಧರಿಸಿ ಸಂಶೋಧನೆಯನ್ನು ೩ ಭಾಗಗಳಾಗಿ ವಿಂಗಡಿಸಲಾಗಿದೆ.

೧. ಐತಿಹಾಸಿಕ ಸಂಶೋಧನೆ.

೨. ವಿವರಣಾತ್ಮಕ ಸಂಶೋಧನೆ.

೩. ಪ್ರಾಯೋಗಿಕ ಸಂಶೋಧನೆ.

ಪ್ರಸ್ತುತ ಇರುವ ಸ್ಥಿತಿಯನ್ನು ವೀಕ್ಷಿಸಿ, ವಿಶ್ಲೇಷಿಸಿ, ವಿವರಿಸುವ ಸಂಶೋಧನೆಯನ್ನು ವಿವರಣಾತ್ಮಕ ಸಂಶೋಧನೆ ಎನ್ನುವರು.

**ಹಂತಗಳು:–**

೧. **ಸಮಸ್ಯೆ ಆಯ್ಕೆ** :– ಶಿಕ್ಷಣ ಕ್ಷೇತ್ರದಲ್ಲಿ ನೀಡುತ್ತಿರುವ ಸೇವಾನಿರತ ತರಬೇತಿಗಳು ಹಾಗೂ ಉಪಗ್ರಹ ಆಧಾರಿತ ತರಬೇತಿಗಳು ನಿರೀಕ್ಷಿತ ಮಟ್ಟದಲ್ಲಿ ಯಶಸ್ಸುಗಳಿಸದಿರುವ ಬಗ್ಗೆ ನಾವು ಕಂಡುಕೊಂಡಿರುವ ವಿಷಯವಾಗಿರುವುದರಿಂದ ತರಬೇತಿಗಳನ್ನು ಪುನರ್ ವ್ಯಾಖ್ಯಾನಿಸಿ, ರೂಪಿಸಿ ವಾಸ್ತವಿಕತೆಗೆ ತಕ್ಕಂತೆ ಚಾಲನೆಗೊಳಿಸುವ ಅತ್ಯಂತ ಮಹತ್ವದ ಪ್ರಯತ್ನವಾಗಬೇಕಿದೆ. ಆ ನಿಟ್ಟಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನೀಡುತ್ತಿರುವ ಸೇವಾನಿರತ ತರಬೇತಿಗಳ ಬಗ್ಗೆ ಒಂದು ಸಮೀಕ್ಷಾವಿಧಾನದಲ್ಲಿ ಅಧ್ಯಯನ ಮಾಡಲಾಗಿದೆ.

೨. ಸಂಶೋಧನಾ ನಿರೂಪಣೆ:– ಪ್ರಸ್ತುತ ಅಧ್ಯಯನ " **ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನೀಡುತ್ತಿರುವ ಸೇವಾನಿರತ ತರಬೇತಿಗಳು– ಒಂದು ಅಧ್ಯಯನ**" . ಅಂದರೆ ಶಿಕ್ಷಕರಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆಯ ಕೌಶಲವನ್ನು ಶಿಕ್ಷಕರ ರೂಢಿಸುವಲ್ಲಿ ನೀಡುತ್ತಿರುವ ತರಬೇತಿಗಳ ಪಾತ್ರ.

೩. ಪ್ರಸ್ತುತ ಅಧ್ಯಯನದಲ್ಲಿ ವಿವರಣಾತ್ಮಕ ಸಂಶೋಧನೆಯಲ್ಲಿನ ಸಮೀಕ್ಷಾವಿಧಾನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. " ಸಮಸ್ಯೆಯು ಕ್ಲಿಷ್ಟಕರವಾದ ಸಂಶೋಧನೆಯಾಗಿದ್ದು ಅಧ್ಯಯನದಿಂದ ಸಂಗ್ರಹಿಸಿದ ಮಾಹಿತಿಯನ್ನು ನಿರ್ದಿಷ್ಟವಾದ ಖಚಿತವಾದ ರೀತಿಯಲ್ಲಿ ನಿರ್ಧಾರಗಳನ್ನು ದಾಖಲಿಸುವುದಾಗಿದೆ." ಇದನ್ನೇ ಸಮೀಕ್ಷಾವಿಧಾನ ಎನ್ನಬಹುದು. ಇಲ್ಲಿ ಕಾರ್ಯನಿರತ ಶಿಕ್ಷಕರಿಂದ ಮಾಹಿತಿ ಸಂಗ್ರಹಣೆ ಮಾಡಲಾಗಿದೆ.

೪. ಅಧ್ಯಯನದ ಪ್ರತಿಚಯನದ ಪ್ರಕ್ರಿಯೆ:–

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಟ್ಟು ೮ ತಾಲ್ಲೂಕುಗಳ ೯೪ ಕ್ಲಸ್ಟರ್ ಗಳಲ್ಲಿರುವ ವಿವಿಧ ಶಾಲೆಗಳ ೪೦೦ ಶಿಕ್ಷಕರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ತಾಲ್ಲೂಕುಗಳ ಸರಾಸರಿ ೫೦ ಶಿಕ್ಷಕರನ್ನು ಆಯ್ಕೆ ಮಾಡಿಕೊಂಡು ಅಭಿಪ್ರಾಯ ಸಂಗ್ರಹಿಸಲಾಗಿದೆ.

೫. ಪ್ರಶಾವಳಿಯ ರಚನಾಕ್ರಮ:

- ೫ ಅಂಶಗಳ ಮಾಪನದ ಪ್ರಶಾವಳಿಗಳನ್ನು ಪ್ರಯೋಗಿಸಲಾಯಿತು.
- ವಿಷಯ ಪರಿಣಿತರು, ಸಂಶೋಧನಾ ತಜ್ಞರ ತಂಡವು ಪರಿಷ್ಕರಣೆ ಮಾಡಲಾಯಿತು.

❖ ಮುದ್ರಿಸಿ, ಪ್ರಶ್ನೆಪತ್ರಿಕೆಯನ್ನು ಸಿಂಧುತ್ವಗೊಳಿಸಲಾಯಿತು.

೬. ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು:–

❖ ಅಂಶಗಳ ಸಂಗ್ರಹಣೆ:–

ಡಿ.ಎಸ್.ಆರ್.ಇ.ಟಿ ಯವರ ಪ್ರಕಟಿತಗೊಂಡ ತರಬೇತಿ ಕೈಪಿಡಿಗಳಿಂದ ಚೈತನ್ಯ–ಭಾಗ–೧,೨, ಪ್ರೇರಣ, ಬುನಾದಿ ಕೈ ಪಿಡಿ, ಶಿಕ್ಷಣದಲ್ಲಿ ರಂಗಕಲೆ, ಚೈತನ್ಯ ತರಣಿ, ಬಹುಮುಖಿ ೧,೨ ಇತ್ಯಾದಿ ಕೈಪಿಡಿಗಳು. ಆರ್.ಐ.ಇ ಮೈಸೂರು ಇವರ **'In-Service Teacher's Training", Primary Education in India by a world Bank Publications Washington D.C.'** ಇವುಗಳಿಂದ ಮಾಹಿತಿ ಸಂಗ್ರಹಿಸಲಾಯಿತು.

❖ ಪ್ರಶಾವಳಿಗಳನ್ನು ಮಾಡಲಾಯಿತು.

❖ ಸಿಂಧುತ್ವ – ಪ್ರಶ್ನಾವಳಿಗಳ ಸಿಂಧುತ್ವ.

7. ದತ್ತಾಂಶಗಳ ಸಂಗ್ರಹಣೆ:–

| ಕ್ರ. ಸಂ | ತಾಲ್ಲೂಕುಗಳ ಹೆಸರು | ಆಯ್ಕೆ ಮಾಡಿದ ಕ್ಲಸ್ಟರ್ ಗಳ ಸಂಖ್ಯೆ | ಅಭಿಪ್ರಾಯ ಸಂಗ್ರಹಿಸಲು ಆಯ್ಕೆ ಮಾಡಿಕೊಂಡ ಶಿಕ್ಷಕರ ಸಂಖ್ಯೆ. |
|---|---|---|---|
| 1 | ದೊಡ್ಡಬಳ್ಳಾಪುರ | 12 | 50 |
| 2 | ಮಾಗಡಿ | 15 | 50 |
| 3 | ದೇವನಹಳ್ಳಿ | 10 | 50 |
| 4 | ರಾಮನಗರ | 12 | 50 |
| 5 | ಚನ್ನಪಟ್ಟಣ | 10 | 50 |
| 6 | ಕನಕಪುರ | 15 | 50 |
| 7 | ಹೊಸಕೋಟೆ | 12 | 50 |
| 8 | ನೆಲಮಂಗಲ | 13 | 50 |
| | ಒಟ್ಟು | | 400 |

ಪ್ರತಿಯೊಂದು ತಾಲ್ಲೂಕುಗಳಲ್ಲಿ ಆಯ್ದ ಕ್ಲಸ್ಟರ್ ಗಳಲ್ಲಿ ಕಾರ್ಯನಿರ್ವಹಿಸುತಿರುವ ಸಿ.ಆರ್.ಪಿ.ಗಳಿಗೆ ಪ್ರಶ್ನಾವಳಿಯನ್ನು ತುಂಬುವ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ನೀಡಿ ಅವರು ಆಯ್ಕೆ ಮಾಡಿದ ಶಾಲೆಗಳ ಸಹಶಿಕ್ಷಕರನ್ನು ಭೇಟಿಯಾಗಿ ಪ್ರಶ್ನಾವಳಿಯನ್ನು ನೀಡಿ ಮುಕ್ತವಾಗಿ ಮತ್ತು ಯಾವುದೇ ಪೂರ್ವಗ್ರಹ ಪೀಡಿತರಾಗದೇ ಪ್ರಶ್ನಾವಳಿಯ ಪ್ರಶ್ನೆಗಳಿಗೆ ತಮ್ಮ ಅಭಿಪ್ರಾಯ ನೀಡುವಂತೆ ಕ್ರಮ ಕೈಗೊಳ್ಳಲಾಯಿತು. ಈ ರೀತಿಯಾಗಿ ದತ್ತಾಂಶಗಳ ಸಂಗ್ರಹಣೆ ಮಾಡಲಾಯಿತು.

8. ಮಾಹಿತಿ ವಿಶ್ಲೇಷಣೆಗೆ ಬಳಸಿದ ಕ್ಷೇತ್ರ:–

❖ ತರಬೇತಿ ಪಡೆದ ಶಿಕ್ಷಕರು.

❖ ತರಬೇತಿ ನೀಡುವ ಮತ್ತು ಅನುಪಾಲನಾ ಕ್ರಮ ಕೈಗೊಳ್ಳುವ ಬಿ.ಆರ್.ಪಿ ಮತ್ತು ಸಿ.ಆರ್. ಪಿಗಳು.

9. ದತ್ತಾಂಶ ವಿಶ್ಲೇಷಣೆಗೆ ಬಳಸಿದ ಸಂಖ್ಯಾ ಶಾಸ್ತ್ರೀಯ ತಂತ್ರಗಳು:–

ಪ್ರಸ್ತುತ ಅಧ್ಯಯನದ ಉದೇಶಗಳಿಗೆ ಅನುಗುಣವಾಗಿ ಸಂಗ್ರಹಿಸಿದ ದತ್ತಾಂಶಗಳು ಸಂಖ್ಯಾಶಾಸ್ತ್ರೀಯ ತಂತ್ರಗಳಾದ ಶೇಕಡವಾರು ಮತ್ತು ಶೇಕಡಕ್ರಮವನ್ನು ಅನುಸರಿಸಲಾಗಿದೆ. ಇದರಲ್ಲಿ ಕೋಷ್ಟಕಗಳನ್ನು ಮತ್ತು ನಕ್ಷೆಗಳನ್ನು ಬಳಸಲಾಗಿದೆ.

10. ಫಲಿತಾಂಶ ಹಾಗೂ ವರದಿ:–

ಈ ಸಂಶೋಧನೆಯಿಂದ ಬಂದ ಫಲಿತಾಂಶ ನೈಜತೆಯನ್ನು ಮರೆಮಾಚಿ, ಸಕರಾತ್ಮಕವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ದೃಷ್ಠಿಯಲ್ಲಿ ತರಬೇತಿಗಳಲ್ಲಿ ಶಿಕ್ಷಕರ ಮತ್ತು ಬಿ.ಆರ್.ಪಿ/ಸಿ.ಆರ್.ಪಿ.ಗಳ

ಪಾತ್ರ ಅತ್ಯಂತ ಮುಖ್ಯವಾಗಿದ್ದು ಇವರ ಬದ್ಧತೆ ಮತ್ತು ಆಸಕ್ತಿಯುತ ಪಾಲ್ಗೊಳ್ಳುವಿಕೆ ಅತ್ಯಂತ ಮುಖ್ಯ. ತರಬೇತಿಗಳು ಈ ದೃಷ್ಟಿಯಲ್ಲಿ ರೂಪುಗೊಂಡು ಅವಶ್ಯಕತೆಯನ್ನು ಆಧರಿಸಿರಬೇಕು.

- ❖ ತರಬೇತಿಗೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳ ವಿಷಯ ಪಾಂಡಿತ್ಯ ಹೆಚ್ಚಾಗಬೇಕು.
- ❖ ನವೀನ ತಂತ್ರಗಳು, ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.
- ❖ ಶಿಕ್ಷಣದಲ್ಲಿ ಉದ್ದೇಶಗಳನ್ನು ಈಡೇರಿಸುವಲ್ಲಿ ಹಾಗೂ ಕ್ರಿಯಾಸಂಶೋಧನೆ ಕೈಗೊಳ್ಳುವಲ್ಲಿ ತರಬೇತಿಗಳು ಸಹಕಾರಿ.
- ❖ ಕಲಿಕಾಮಟ್ಟವನ್ನು ಹೆಚ್ಚಿಸುವಲ್ಲಿ ತರಬೇತಿಗಳು ಉಪಯುಕ್ತವಾಗಿವೆ
- ❖ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಮಾರ್ಗದರ್ಶನ ನೀಡುವಲ್ಲಿ ತರಬೇತಿಗಳ ಪಾತ್ರ ಪ್ರಮುಖವಾದದ್ದು ಎಂದು ಅಭಿಪ್ರಾಯ.
- ❖ ತರಬೇತಿಯ ಉಪಯುಕ್ತತೆ ಬಗ್ಗೆ ಶಿಕ್ಷಕರಿಂದ ಸಂವಾದ ಮತ್ತು ಸಂದರ್ಶನಾ ವಿಧಾನದ ಮೂಲಕ ಅಧ್ಯಯನ ಕೈಗೊಂಡರೆ ಒಳಿತು.

ಈ ಎಲ್ಲಾ ಅಂಶಗಳ ವರದಿಯನ್ನು ವಿಶ್ಲೇಷಿಸಿ, 68ಪುಟಗಳ ವರದಿಯನ್ನು ಸಲ್ಲಿಸಲಾಗಿದೆ. ಮುಂದಿನ ಸಂಶೋಧಕರಿಗೆ ಸಲಹೆಗಳನ್ನು ಮತ್ತು ಸೂಚನೆಗಳನ್ನು ಕೊಡಲಾಗಿದೆ.

## 2. ಪ್ರಾಯೋಗಿಕ ಅಧ್ಯಯನ:–

ನಿಯಂತ್ರಣ ಮತ್ತು ಪ್ರಾಯೋಗಿಕ ಗುಂಪುಗಳ ನಡುವೆ ಚರಾಂಶಗಳನ್ನು ಅಳೆಯುವುದು. ಹಾಗೂ ಎರಡು ಗುಂಪುಗಳನ್ನು ವಾತಾವರಣಗಳ ವಿಭಿನ್ನತೆಯಲ್ಲಿ ಪ್ರಯೋಗಕ್ಕೆ ಅಳವಡಿಸುವುದು. ನಂತರ ವ್ಯತ್ಯಾಸವನ್ನು ಹಾಗೂ ಕಂಡುಬಂದ ಫಲಿತಾಂಶವನ್ನು ವಿಶ್ಲೇಷಿಸುವುದು. ಈ ಅಧ್ಯಯನಕ್ಕೆ ಪ್ರಾಯೋಗಿಕ ಅಧ್ಯಯನ ಎಂದು ಕರೆಯುತ್ತಾರೆ.

### ಹಂತಗಳು:–

### 1. ಸಮಸ್ಯೆಯ ಆಯ್ಕೆ ಮತ್ತು ವ್ಯಾಪ್ತಿ, ವ್ಯಾಖ್ಯಾನಿಸುವುದು:–

**ಬಿ.ಎಫ್.ಸ್ಕಿನ್ನರ್ ರವರ ಪ್ರಕಾರ " ಶಿಕ್ಷಕರು ಜ್ಞಾನವನ್ನು ವಿದ್ಯಾರ್ಥಿಗಳಿಗೆ ನೀಡುವ ಜ್ಞಾನವಾಹಕರು".** ಇಂತಹ ಶಿಕ್ಷಕರು ತಮ್ಮ ಬೋಧನೆಯಲ್ಲಿ ಮಾರ್ಪಾಡು ತರಬಲ್ಲ ಯಾವುದೇ ಹೊಸ ವಿಧಾನ, ಚಿಂತನೆ, ಸೂಚನೆ ನೀಡುವಲ್ಲಿ ತರಬೇತಿ ಅವಶ್ಯ. ಅಂತಹ ತರಬೇತಿಗಳಲ್ಲಿ **ಚೈತನ್ಯ ತರಬೇತಿಯು** ಒಂದು. ಸಾಮರ್ಥ್ಯ ಆಧಾರಿತ ಕಲಿಕೆಗೆ ಹೊಂದಿಕೆಯಾಗುವ ಚಟುವಟಿಕೆಗಳನ್ನು ಅಳವಡಿಸುವುದು ಮತ್ತು ಕಲಿಕೆಗಾಗಿ ತರಗತಿಯಲ್ಲಿ ಉತ್ತಮವಾದ ವಾತಾವರಣವನ್ನು ನಿರ್ಮಿಸುವಂತೆ ಮಾಡುವುದೇ ಚೈತನ್ಯದ ಉದ್ದೇಶವಾಗಿದೆ. ಇದಕ್ಕಾಗಿ ಬೇಕಾಗುವ ಕಲಿಕೆಯ ತಂತ್ರಗಳನ್ನು, ಹಾಗೂ ಕಲಿಕೆಯ ಆಯಾಮಗಳನ್ನು ತರಬೇತಿಯಲ್ಲಿ ನೀಡಲಾಗುತ್ತದೆ. ಪ್ರಾಯೋಗಿಕವಾಗಿ **"ಚೈತನ್ಯ ತರಬೇತಿ ಅಳವಡಿಸಿಕೊಳ್ಳದ ಹಾಗೂ ಚೈತನ್ಯ ತರಬೇತಿ ಅಳವಡಿಸಿಕೊಂಡಿರುವ ಶಿಕ್ಷಕರ ಬೋಧನೆ ನಡುವಿನ ವ್ಯತ್ಯಾಸವನ್ನು ಅರಿಯುವುದು".**

### 2. ಸಮಸ್ಯೆಗೆ ಪೂರಕವಾದ ಸಾಹಿತ್ಯಾವಲೋಕನ:–

" ಒಂದು ನಿರ್ದಿಷ್ಠ ಕ್ಷೇತ್ರದಲ್ಲಿ ಪಡೆದಂತಹ ಜ್ಞಾನವನ್ನು ಸಾಹಿತ್ಯ" ಎನ್ನುತ್ತಾರೆ. ಪಡೆದಂತಹ ಜ್ಞಾನವನ್ನು ವ್ಯವಸ್ಥಿತವಾಗಿ ಸಂಘಟನೆ ಮಾಡುವುದನ್ನು ಸಾಹಿತ್ಯ ಪುನರಾವಲೋಕನ ಎನ್ನುವರು. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು. ಇವರ ಸಾಹಿತ್ಯಗಳ ಕೈಪಿಡಿ

1. ಚೈತನ್ಯ ಭಾಗ–1,2.
2. ಚೈತನ್ಯ ತರಣಿ.
3. ಶಿಕ್ಷಕರ ಮಾರ್ಗದರ್ಶಿ. ಇತ್ಯಾದಿ.

**3. ಪ್ರತಿಚಯನ ಅಥವಾ ನಿಗದಿತ ಜನಸಂಖ್ಯೆ:–**

ನಾಲ್ಕನೇ ತರಗತಿಯ 40 ಮಕ್ಕಳು, ಚೈತನ್ಯ ತರಬೇತಿ ಆಗಿರುವ ಒಬ್ಬರು ಶಿಕ್ಷಕರು.


ನಾಲ್ಕನೇ ತರಗತಿಯ 40 ಮಕ್ಕಳು, ಚೈತನ್ಯ ತರಬೇತಿ ಆಗದೇ ಇರುವ ಒಬ್ಬರು ಶಿಕ್ಷಕರು.

**4. ಪ್ರಾಯೋಗಿಕ ಯೋಜನೆಯನ್ನು ತಯಾರಿಸುವುದು:–**

- ಒಂದೇ ಶಾಲೆಯಲ್ಲಿ ಈ ಪ್ರಯೋಗವನ್ನು ನಿಗದಿಪಡಿಸುವುದು.
- ಆವಧಿ 2 ತಿಂಗಳು ಎಂದು ನಿಗದಿಪಡಿಸುವುದು.
- ಕಲಿಕಾ ಸಾಮಗ್ರಿಗಳು ಅಥವಾ ಪ್ರಾಯೋಗಿಕ ಸಾಮಗ್ರಿಗಳು: ಚೈತನ್ಯ ತರಬೇತಿಗೆ ಬೇಕಾಗಿರುವ ಮಿಂಚುಪಟ್ಟಿಗಳು, ಚಿತ್ರಸಹಿತ ಪದಗಳ ಕಾರ್ಡುಗಳು,ಮಣಿಗಳು, ಗೋಲಿಗಳು, ಕಪ್ಪೆಚಿಪ್ಪುಗಳು, ಕವಡೆಗಳು, ಬಣ್ಣದ ಚಿಟ್ಟೆಗಳು, ಗಾಳ–ಮೀನುಗಳು,ಅಂಕೆರೈಲು, ಪ್ರಾಣಿ, ಪಕ್ಷಿ, ತರಕಾರಿ ಚಿತ್ರಗಳ ಕಾರ್ಡುಗಳು.ಕಡ್ಡಿ, ಕಲ್ಲುಗಳು, ಹುಣಿಸೆಬೀಜಗಳು, ರೇಖಾಚಿತ್ರಗಳು, ಕಥೆಸಹಿತ ಚಿತ್ರಗಳ ಕಾರ್ಡುಗಳು, ರೋಲಿಂಗ್ ಬೋರ್ಡ್‌ಗಳು, ಹಾಡುಗಳು, ನೃತ್ಯಗಳು, ತಿರುಗುವ ಕಾರ್ಡುಗಳು, ಕೀಲುಗೊಂಬೆ, ಇತ್ಯಾದಿ.
- ಆಯ್ಕೆಗೊಂಡ ಮಕ್ಕಳು 40+40= 80ಜನ ಮಕ್ಕಳು, ವಿಷಯ: ಗಣಿತ.
- ಪೂರ್ವಪರೀಕ್ಷೆಯನ್ನು ಮಾಡುವುದು., ಸಾಫಲ್ಯ ಪರೀಕ್ಷೆ ಮಾಡಿ, ನಂತರ ಫಲಿತಾಂಶವನ್ನು ವಿಶ್ಲೇಷಣೆ ಮಾಡುವುದು. ಗ್ರಾಫ್ ಮೂಲಕ ಫಲಿತಾಂಶ ವಿಶ್ಲೇಷಣೆ ಮಾಡುವುದು.

**5. ಪ್ರಾಯೋಗಿಕ ಕಾರ್ಯವನ್ನು ನಡೆಸುವುದು.**

| ಗುಂಪು | ಸ್ವತಂತ್ರ ಚರಾಂಶ | ಪೂರ್ವ ಪರೀಕ್ಷೆ | ಸಾಫಲ್ಯ ಪರೀಕ್ಷೆ | ಫಲಿತಾಂಶ | ವಿಶ್ಲೇಷಣೆ |
|---|---|---|---|---|---|
| ಪ್ರಾಯೋಗಿಕ | ಹೊಸಪದ್ಧತಿ ಮೂಲಕ ಬೋಧನೆ. ಚೈತನ್ಯ ತರಬೇತಿ ಅಳವಡಿಸಿಕೊಂಡಿರುವ ಶಿಕ್ಷಕರು. | 40 ಮಕ್ಕಳು+ ಶಿಕ್ಷಕರು ಒಬ್ಬರು | 40 ಮಕ್ಕಳು+ ಶಿಕ್ಷಕರು ಒಬ್ಬರು | ಮೌಲ್ಯ ಮಾಪನ | ಚರಾಂಶಗಳ ನಡುವಿನ ಅಂತರ ಅಳೆಯುವುದು. |
| ನಿಯಂತ್ರಣ | ಸಂಪ್ರದಾಯಪದ್ಧತಿ ಮೂಲಕ ಬೋಧನೆ. ಚೈತನ್ಯ ತರಬೇತಿ ಅಳವಡಿಸಿಕೊಳ್ಳದ ಶಿಕ್ಷಕರು. | 40 ಮಕ್ಕಳು+ ಶಿಕ್ಷಕರು ಒಬ್ಬರು | 40 ಮಕ್ಕಳು+ ಶಿಕ್ಷಕರು ಒಬ್ಬರು | ಮೌಲ್ಯ ಮಾಪನ | ಚರಾಂಶಗಳ ನಡುವಿನ ಅಂತರ ಅಳೆಯುವುದು. |

| ಕ್ರ.ಸಂ | ಕಲಿಕೋಪಕರಣದ ಹೆಸರು | ಬೇಕಾಗುವ ಸಾಮಗ್ರಿಗಳು | ಮಾಡುವ ವಿಧಾನ | ಸಾಮರ್ಥ್ಯಗಳು |
|---|---|---|---|---|
| 1 | ಗೋಲ | 1. ಡ್ರಾಯಿಂಗ್‌ಶೀಟ್<br>2. ಕೋನಮಾಪಕ<br>3.ಕೈವಾರ, ಸ್ಕೇಲ್<br>4.ಕತ್ತರಿ | ಚಿತ್ರದಲ್ಲಿ ತೋರಿಸಿರುವಂತೆ ವೃತ್ತಗಳನ್ನು ಕತ್ತರಿಸಿಕೊಳ್ಳಿರಿ. ಕೋನಗಳನ್ನು ಗುರುತಿಸಿ. | 4ನೇ ತರಗತಿಯಲ್ಲಿ, ಗೋಲ ಮತ್ತು ವೃತ್ತದ ವ್ಯತ್ಯಾಸ. |
| 2 | ಚೌಕ |  | ಚೌಕಕಾರವನ್ನು ಕತ್ತರಿಸಿ ಗುರುತಿಸಿಕೊಳ್ಳುವುದು. | ಚೌಕದ ಗುಣಲಕ್ಷಣಗಳನ್ನು ತಿಳಿಯುವುದು. |

ಈ ರೀತಿಯಾಗಿ ಪ್ರತಿಯೊಂದು ದಿನವೂ, ಪ್ರತಿಯೊಂದು ರೀತಿಯ ಚಟುವಟಿಕೆಯ ಮೂಲಕ ಚೈತನ್ಯ ತರಬೇತಿಯನ್ನು ಅಳವಡಿಸಿಕೊಂಡು ಮಕ್ಕಳಿಗೆ ಬೋಧನೆ ಮಾಡುವುದು.

ನೇರವಾಗಿ ಚೈತನ್ಯ ಮಾದರಿಯಿಲ್ಲದಂತಹ ಪಾಠವನ್ನು ಬೋಧನೆ ಮಾಡುವುದು.

## 6. ಹೊರಬಂದಂತಹ ಅಂಶವನ್ನು ಅಳೆಯುವುದು.

ಪೂರ್ವಪರೀಕ್ಷೆಯ, ಸಾಫಲ್ಯ ಪರೀಕ್ಷೆಯನ್ನು ಮಾಡಿ ವ್ಯತ್ಯಾಸವನ್ನು ವಿಶ್ಲೇಷಣೆ ಮಾಡುವುದು. ಅದೇ ರೀತಿ ಚೈತನ್ಯ ಮಾದರಿಬೋಧನೆಗೆ ಒಳಪಟ್ಟಿರುವ ಮಕ್ಕಳಿಗೂ ಸಹ ಪೂರ್ವಪರೀಕ್ಷೆಯ, ಸಾಫಲ್ಯ ಪರೀಕ್ಷೆಯನ್ನು ಮಾಡಿ ವ್ಯತ್ಯಾಸವನ್ನು ವಿಶ್ಲೇಷಣೆ ಮಾಡುವುದು. ಈ ಎರಡರ ನಡುವಿನ ವ್ಯತ್ಯಾಸವನ್ನು ಅಳೆಯುವುದು. ಅಂತಿಮವಾಗಿ ಅದರ ಫಲಿತಾಂಶವನ್ನು ತಾಂತ್ರಿಕವಾಗಿ ಅರ್ಥೈಸುವುದು.

## 7. ಫಲಿತಾಂಶವನ್ನು ವಿಶ್ಲೇಷಿಸುವುದು ಹಾಗೂ ಅರ್ಥೈಸುವುದು.

ಸಂಖ್ಯಾಶಾಸ್ತ್ರೀಯ ವಿಧಾನದ ಮೂಲಕ ಫಲಿತಾಂಶವನ್ನು ವಿಶ್ಲೇಷಿಸುವುದು. ಮಾನಕ ವಿಚಲನೆ ಮೂಲಕ ವಿಶ್ಲೇಷಿಸಿದಾಗ, ಚೈತನ್ಯ ಮಾದರಿಬೋಧನೆಗೆ ಒಳಪಟ್ಟಿರುವ ಮಕ್ಕಳು 80% ರತನಕ ಉತ್ತೀರ್ಣರಾದರೇ, ಚೈತನ್ಯ ಮಾದರಿಯಿಲ್ಲದಂತಹ ಮಕ್ಕಳು 40% ಮಾತ್ರ ಉತ್ತೀರ್ಣರಾಗಿರುತ್ತಾರೆ.

## 8. ಫಲಿತಾಂಶದ ಒಂದು ತೀರ್ಮಾನ.:–

- ❖ ಚಟುವಟಿಕೆಯಾಧಾರಿತ ಕಲಿಕೆಯು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು.
- ❖ ಪ್ರಾಥಮಿಕ ಹಂತದಲ್ಲಿ ವಿವಿಧ ರೀತಿಯ ಆಟಗಳು, ಆಟಿಕೆಗಳು, ಸರಳ ಕ್ರಾಫ್ಟನಂತಹ ಚಟುವಟಿಕೆಗಳು ಕಲಿಕೆಯ ಪ್ರಕ್ರಿಯೆಯಲ್ಲಿ ಕೇಂದ್ರಬಿಂದುಗಳಾಗಬೇಕು.
- ❖ ಖಾಯಂ ಆಗಿ ತರಗತಿಯ ಒಂದು ಭಾಗವಾಗಿ ಇಂತಹ ಪ್ರದರ್ಶನ ಸಾಧ್ಯವೇ? ಯೋಚಿಸಬೇಕು.
- ❖ ಶೈಕ್ಷಣಿಕ ಸಾಮಗ್ರಿಗಳು, ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ತಾಂತ್ರಿಕ ಸೌಲಭ್ಯಗಳನ್ನು ಒಟ್ಟು ತರುವ ಒಂದು ಸಾಧನವಾಗಿವೆ ಎನ್ನುವುದನ್ನು ಗಮನಿಸಬೇಕು ಇದು ಶೈಕ್ಷಣಿಕ ರಂಗದಲ್ಲಿ ನಡೆಯುವ ಒಂದು ನಿರಂತರ ಪ್ರಕ್ರಿಯೆ.

9. ಫಲಿತಾಂಶದ ಬಗ್ಗೆ ಒಂದು ವರದಿ ಸಲ್ಲಿಸುವಿಕೆ.

- ❖ ಪ್ರಾಯೋಗಿಕ ಮತ್ತು ಸಂಪ್ರದಾಯಿಕ ಬೋಧನಾ ಪದ್ಧತಿ ನಡುವಿನ ಅಂತರವನ್ನು ವಿಶ್ಲೇಷಿಸಿ, ವರದಿಯನ್ನು ತಯಾರಿಸುವುದು.
- ❖ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಹಂತಗಳ ಮೂಲಕ ವಿಶ್ಲೇಷಿಸಿ, ತದನಂತರ ಅವುಗಳನ್ನು ಗಮನದಲ್ಲಿರಿಸಿಕೊಂಡು, ತಾಂತ್ರಿಕ ಹಾಗೂ ಸಂಖ್ಯಾಶಾಸ್ತ್ರೀಯ ಪದ್ಧತಿಗಳ ಮೂಲಕ ಬಂದ ಫಲಿತಾಂಶವನ್ನು ವಿಶ್ಲೇಷಿಸಿ, ಒಟ್ಟುಗೂಡಿಸಿ ವರದಿಯನ್ನು ಸಲ್ಲಿಸಲಾಯಿತು.

## 3. ವ್ಯಕ್ತಿ ಅಧ್ಯಯನ:–

ಪೀಠಿಕೆ:– ಒಬ್ಬ ವಿದ್ಯಾರ್ಥಿಯ ಸಮಸ್ಯಾತ್ಮಕ ವರ್ತನೆಯನ್ನು ವೀಕ್ಷಿಸಿ, ಕಾರಣಗಳನ್ನು ಗುರುತಿಸಿ, ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳುವ ಮೌಲಿಕ ವಿಧಾನವೆ ವ್ಯಕ್ತಿ ಅಧ್ಯಯನ.

ಈ ವಿಧಾನದಲ್ಲಿ ವ್ಯಕ್ತಿಯ ಇಲ್ಲವೇ ವಿದ್ಯಾರ್ಥಿಯ ಸಮಗ್ರವಾದ ವ್ಯಕ್ತಿ ಚರಿತ್ರೆಯನ್ನು ಸಿದ್ದಪಡಿಸಲು ಕೆಲವು ಮಾಹಿತಿ ಸಂಗ್ರಹಣೆಯ ತಂತ್ರಗಳನ್ನು ಬಳಸಲಾಗುತ್ತದೆ.

ಅವುಗಳೆಂದರೆ ವೀಕ್ಷಣೆ, ಸಂದರ್ಶನ, ದಾಖಲೆಗಳ ಪರಿಶೀಲನೆ, ಪ್ರಶ್ನಾವಳಿಗಳು, ಸ್ವಯಂವರದಿ ಪರೀಕ್ಷಣಗಳು.

ವಿದ್ಯಾರ್ಥಿ, ವಿದ್ಯಾರ್ಥಿಯ ತರಗತಿ ಶಿಕ್ಷಕ, ಸಹಪಾಠಿಗಳು, ಹತ್ತಿರದ ಸಂಬಂಧಿಗಳು, ನೆರೆಹೊರೆಯವರು ಮತ್ತು ಇತರೆ ಸಂಬಂಧಿಸಿದ ವ್ಯಕ್ತಿಗಳಿಂದ ಸಮಸ್ಯೆ ಹೊಂದಿದ ವಿದ್ಯಾರ್ಥಿಯ ಬಗ್ಗೆ ಕಾರಣಗಳನ್ನು ಶೋಧಿಸಿ ನಿಖರವಾದ ಮಾಹಿತಿಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಲಾಗುತ್ತದೆ. ಹೀಗೆ ಸಂಗ್ರಹಿಸಿರುವ ಮಾಹಿತಿಗಳನ್ನು ಆಳವಾಗಿ ಪರಿಶೋಧಿಸಿ, ವಿಶ್ಲೇಷಿಸಿ ಅಧ್ಯಯನಮಾಡಿ ನಿರ್ದಿಷ್ಟ ತೀರ್ಮಾನಗಳಿಗೆ ಬರಲಾಗುತ್ತದೆ.

ಈ ತೀರ್ಮಾನಗಳನ್ನು ಆಧರಿಸಿ ಸೂಕ್ತ ಸಲಹೆ, ಸೂಚನೆ, ನಿವಾರಣೋಪಾಯಗಳನ್ನು ಮಾರ್ಗದರ್ಶನದ ಮೂಲಕ ವಿದ್ಯಾರ್ಥಿಗೆ, ಆತನ ಪೋಷಕರಿಗೆ, ಆತನ ಕುಟುಂಬದ ಸದಸ್ಯರಿಗೆ, ತರಗತಿ ಶಿಕ್ಷಕರಿಗೆ ಹಾಗೂ ಆತನೊಂದಿಗೆ ವ್ಯವಹರಿಸುವ ಇತರೆ ಸಂಬಂಧಿಸಿದವರಿಗೆ ತಮ್ಮ ವರ್ತನೆಯಲ್ಲಿ ಸೂಕ್ತ ಬದಲಾವಣೆ ತಂದುಕೊಳ್ಳಲು, ಸರಿಹೊಂದಾಣಿಕೆ ಮಾಡಿಕೊಳ್ಳಲು ನೀಡಲಾಗುತ್ತದೆ ಹಾಗೂ ಅವುಗಳ ಅನುಪಾಲನೆ ಮಾಡಿ ಪ್ರಗತಿಯನ್ನು ಗಮನಿಸಲಾಗುತ್ತದೆ.

ಈ ಅಧ್ಯಯನ ವಿಧಾನವು ಶೈಕ್ಷಣಿಕ ಕ್ಷೇತ್ರದಲ್ಲಿ ವರ್ತನೆ, ಕಲಿಕೆ, ವ್ಯಕ್ತಿತ್ವ, ಹೊಂದಾಣಿಕೆ ಕುರಿತಂತೆ ಇರುವ ಮಕ್ಕಳ ಸಮಸ್ಯೆಗಳಿಗೆ ಕಾರಣಗಳನ್ನು ಗುರುತಿಸಲು, ಸೂಕ್ತ ನಿವಾರಣೋಪಾಯಗಳನ್ನು ಕಂಡುಕೊಂಡು ಮಾರ್ಗದರ್ಶನ ಮಾಡಲು ಶಿಕ್ಷಕರಿಗೆ ಉಪಯುಕ್ತವೆನಿಸಿದೆ.

ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಈ ಕೆಳಗಿನ ಸಮಸ್ಯೆಗಳುಳ್ಳ ಮಕ್ಕಳ ಬಗ್ಗೆ ವ್ಯಕ್ತಿ ಅಧ್ಯಯನಕೈಗೊಳ್ಳಬಹುದು.

- ❖ ಬುದ್ಧಿಮಾಂದ್ಯ ಮಕ್ಕಳು,
- ❖ ವಿವಿಧ ದೈಹಿಕ ಸವಾಲುಗಳುಳ್ಳ ಮಕ್ಕಳು,
- ❖ ನಿಧಾನ ಕಲಿಕೆಯ ಮಕ್ಕಳು,

- ❖ ಭಾಷೆ,ಗಣಿತ ಮುಂತಾದ ವಿಷಯಗಳಲ್ಲಿ ನಿರ್ದಿಷ್ಟ ಕಲಿಕೆಯ ದೋಷಗಳನ್ನು ಹೊಂದಿರುವ ಮಕ್ಕಳು,
- ❖ ಶಾಲೆ ಬಿಟ್ಟ ಮಕ್ಕಳು,
- ❖ ಶಾಲೆಗೆ ನಿರಂತರ ಗೈರುಹಾಜರಾಗುವ ಮಕ್ಕಳು,
- ❖ ಬಾಲಾಪರಾಧಿ ಮಕ್ಕಳು,
- ❖ ಪ್ರತಿಭಾವಂತ ಮಕ್ಕಳು,
- ❖ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಮಕ್ಕಳು,

ಇತ್ಯಾದಿ ಹಿನ್ನೆಲೆಯ ಮಕ್ಕಳನ್ನು ತರಗತಿಯ ಇಲ್ಲವೇ ತರಗತಿ ಹೊರಗಿನಿಂದ ಆಯ್ದು ಪ್ರಾಯೋಗಿಕವಾಗಿ ಅಧ್ಯಯನಕ್ಕೆ ಒಳಪಡಿಸಿದೆ.

## 2. ಅಧ್ಯಯನದ ಶೀರ್ಷಿಕೆ:–

ವಿದ್ಯಾರ್ಥಿಯ ಸಮಸ್ಯೆಯ ಅಧ್ಯಯನ ಮತ್ತು ನಿವಾರಣೋಪಾಯಗಳು:–

**" 4ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ ದಿವ್ಯ ಎಂಬ ಅಂಧ ವಿದ್ಯಾರ್ಥಿಯನ್ನು ಕುರಿತು ವ್ಯಕ್ತಿ ಅಧ್ಯಯನ".**

## 3. ಉದ್ದೇಶಗಳು:–

1. ವಿದ್ಯಾರ್ಥಿಯ ಸಮಸ್ಯೆಯ ಸ್ವರೂಪವನ್ನು ಸ್ಪಷ್ಟವಾಗಿ ಗುರುತಿಸುವುದು.
   ವಿದ್ಯಾರ್ಥಿನಿಯು ಸಾಮಾನ್ಯ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಹಾಗೂ ಅವುಗಳಲ್ಲಿ ಪಾಲ್ಗೊಳ್ಳುವಲ್ಲಿ ಅಸಮರ್ಥರಾದವರಾಗಿರುವರು. ಅಸಮರ್ಥತೆಯು ಅವರಲ್ಲಿ ಸಂವೇಗಾತ್ಮಕ ಸಮಸ್ಯೆಗಳನ್ನುಂಟು ಮಾಡುವುದು. ಉದಾ:– ಮುಂಗೋಪ.
   ದೈಹಿಕ ದೌರ್ಬಲ್ಯವು ಅವಳಿಗೆ ಸಾಮಾನ್ಯ ಚಟುವಟಿಕೆಯಲ್ಲಿ, ಅಂಗವಿಕಲತೆ ಪ್ರಗತಿಯಲ್ಲಿ ಅಡಚಣೆಗೊಳಿಸುವುದು.
2. ಸಮಸ್ಯೆಗೆ ಕಾರಣವಾದ ಅಂಶಗಳ ಕುರಿತಂತೆ ಸೂಕ್ತ ತಂತ್ರಗಳಿಂದ ನಿಖರವಾದ ಮಾಹಿತಿ ಸಂಗ್ರಹಿಸುವುದು.

ಎಲ್ಲಾ ವಿಧದ ವೈದ್ಯಕೀಯ ಮತ್ತು ದೃಷ್ಟಿ ಉಪಕರಣಗಳ ಸಹಾಯ ಪಡೆದ ನಂತರ 20/70 ರಿಂದ 20/200 ರವರೆಗಿನ ದೃಷ್ಟಿ ತೀಕ್ಷ್ಣತೆ ಹೊಂದಿರುವ ಮಕ್ಕಳನ್ನು ಭಾಗಶ: ಅಥವಾ ಅಪೂರ್ಣ ದೃಷ್ಟಿಯುಳ್ಳವರೆಂದು ಪರಿಗಣಿಸಲಾಗಿದೆ. 20/200ಕ್ಕಿಂತ ಕಡಿಮೆ ದೃಷ್ಟಿ ತೀಕ್ಷ್ಣತೆಯುಳ್ಳವರು ಅಂಧರು.

ಕುರುಡುತನಕ್ಕೆ ಕೆಳಗೆ ವಿವರಿಸಿದ 3 ಕಾರಣಗಳು ಪ್ರಮುಖವಾಗಿವೆ:–

1. ಹುಟ್ಟಿನಿಂದ ಬಂದ ಕುರುಡುತನ.
2. ಅನುವಂಶಿಕವಾಗಿ ಬಂದ ಕುರುಡುತನ.
3. ಹೆಚ್ಚು ಶ್ರಮದಿಂದ ಬಂದ ಕುರುಡುತನ.

3. ಸಂಗ್ರಹಿಸಲಾದ ಮಾಹಿತಿಗಳನ್ನು ವಿಶ್ಲೇಷಿಸಿ ಆಳವಾಗಿ ಅಧ್ಯಯನ ಮಾಡುವುದು.
   ವೈದಕೀಯ ಮತ್ತು ವಿದ್ಯಾರ್ಥಿನಿಯ ಸಂಬಂಧಪಟ್ಟ ಮಾಹಿತಿಗಳನ್ನು ವಿಶ್ಲೇಷಿಸಿ ಆಳವಾಗಿ ಅಧ್ಯಯನ ಮಾಡುವುದು.
4. ಸಮಸ್ಯೆಗೆ ಕಾರಣಗಳನ್ನು ಆಧರಿಸಿ ಸೂಕ್ತ ತೀರ್ಮಾನಗಳನ್ನು ಕೈಗೊಳ್ಳುವುದು.
   ಸಮನ್ವಯ ಶಿಕ್ಷಣದ ಮೂಲಕ ಶಿಕ್ಷಣ.

5. ಶೈಕ್ಷಣಿಕ ಮಾರ್ಗದರ್ಶನದ ಮೂಲಕ ನಿವಾರಣೋಪಾಯಗಳನ್ನು ಕೈಗೊಳ್ಳುವುದು.

ವಿಶೇಷ ಶಿಕ್ಷಣದ ವ್ಯವಸ್ಥೆ. ಸಮನ್ವಯ ಶಿಕ್ಷಣ, ಬ್ರೈಲ್ ಲಿಪಿ ಹಾಗೂ ವೈದ್ಯಕೀಯ ಸಹಾಯ.

6. ಅನುಪಾಲನೆ ಮಾಡಿ ಪ್ರಗತಿಯನ್ನು ಗಮನಿಸುವುದು.

ಪ್ರತಿ ಮಾಸಿಕ ಮಗುವಿನ ಪ್ರಗತಿ ಪರಿಶೀಲನೆ ಮಾಡಿ, ಮುಂದಿನ ಕ್ರಮಕೈಗೊಳ್ಳುವುದು.

## 4. ವ್ಯಕ್ತಿ ಅಧ್ಯಯನ ನಡೆಸುವ ವಿಧಾನ:-

**1ನೇ ಹಂತ:** ವಿದ್ಯಾರ್ಥಿಯ ಸಮಸ್ಯೆಯನ್ನು ಸ್ಪಷ್ಟವಾಗಿ ಗುರುತಿಸುವುದು ಹಾಗೂ ಲಕ್ಷಣಗಳನ್ನು ಪಟ್ಟಿ ಮಾಡುವುದು.

❖ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಕಾಮಾಕ್ಷಿಪಾಳ್ಯ, ಬೆಂಗಳೂರು, ಉತ್ತರವಲಯ-1, ಬೆಂಗಳೂರು-79 ಈ ಶಾಲೆಯಲ್ಲಿ 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ದಿವ್ಯ.ಎಲ್. ಎಂಬ ವಿದ್ಯಾರ್ಥಿನಿಯನ್ನು ವ್ಯಕ್ತಿ ಅಧ್ಯಯನಕ್ಕಾಗಿ ಆಯ್ದುಕೊಂಡಿದ್ದೇನೆ.

❖ ಈ ವಿದ್ಯಾರ್ಥಿಯು ಪ್ರಮುಖವಾಗಿ ದೈಹಿಕ ನ್ಯೂನತೆಯನ್ನು ಹೊಂದಿದ್ದು, ಈಕೆಯ ಬಲಗಣ್ಣು ಕಾಣಿಸುವುದಿಲ್ಲ. ಆದರೆ ಈಕೆಯನ್ನು ಸಾಮಾನ್ಯವಾಗಿ ನೋಡಿದರೆ ಅಂಧಳೆಂದು ತಿಳಿಯುವುದೇ ಇಲ್ಲ. ಅಲ್ಲದೆ ಈಕೆ ಕಲಿಕೆಯಲ್ಲಿಯೂ ಸಹ ಹಿಂದುಳಿದಿದ್ದಾಳೆ. ಇದಕ್ಕೆ ಕಾರಣ ಕಣ್ಣಿನ ದೋಷವೇ ಆಗಿದೆ.

❖ ಕಪ್ಪುಹಲಗೆಬರಹ ಕಾಣುವುದಿಲ್ಲ. ಹತ್ತಿರ ಬಂದು ಕೇಳಿ ಬರೆಯುವುದು.

❖ ಮೆಳ್ಳೆಗಣ್ಣು, ದೃಷ್ಠಿ ನೇರವಾಗಿರುವುದಿಲ್ಲ.

❖ ಏಕದೃಷ್ಠಿಯನ್ನು ಹೊಂದಿರುವುದು. ಬರೆಯಲು, ಓದಲು, ಕೆಲವೊಂದು ವಿಚಾರಗಳಿಗೆ ಸ್ನೇಹಿತೆಯರನ್ನು ಅವಲಂಬಿಸುವುದು.

**2ನೇ ಹಂತ:** ಸಮಸ್ಯೆಗೆ ಕಾರಣಗಳನ್ನು ವಿವಿಧ ಮೂಲಗಳಿಂದ ನಿಖರವಾದ ಮಾಹಿತಿಗಳನ್ನು ಸಂಗ್ರಹಿಸುವುದು.

❖ ವೀಕ್ಷಣಾ ವಿಧಾನ

❖ ಸಂದರ್ಶನಾ ವಿಧಾನ

❖ ಸ್ವಯಂ ವರದಿಯ ವಿಧಾನ

❖ ಶಾಲಾ ದಾಖಲಿಗಳ ಪರಿಶೀಲನೆ

ಸೂಕ್ತ ಮಾಹಿತಿ ಸಂಗ್ರಹಣಾ ವಿಧಾನಗಳ ಮೂಲಕ ವಿದ್ಯಾರ್ಥಿ ಕುರಿತಂತೆ ಮಾಹಿತಿ ಸಂಗ್ರಹಿಸುವಾಗ, ಪ್ರಶ್ನಾವಳಿಗಳಲ್ಲಿ ಈ ದೃಷ್ಟಿಕೋನಗಳು ಅಡಕವಾಗಿರಬೇಕು.

1. ವಿದ್ಯಾರ್ಥಿಯ ವೈಯಕ್ತಿಕ ಹಿನ್ನಲೆ: ದಿವ್ಯ.ಎಲ್.

ಅ) ವಿದ್ಯಾರ್ಥಿಯ ಹುಟ್ಟಿದ ದಿನಾಂಕ, ಲಿಂಗ, ವಯಸ್ಸು,:- 26-06-2000, ಸ್ತ್ರೀಲಿಂಗ, 8ವರ್ಷ

ಆ) ವಿದ್ಯಾರ್ಥಿಯ ಅಗತ್ಯತೆ:- ಆತ್ಮಧೈರ್ಯ ಹಾಗೂ ಉತ್ತಮ ವಿದ್ಯಾಭ್ಯಾಸ

ಇ) ವಿದ್ಯಾರ್ಥಿಯ ಆಸಕ್ತಿ, ಅಭಿರುಚಿ ಹಾಗೂ ಆಕಾಂಕ್ಷೆಗಳು:- ಇದೆ.

ಈ) ವಿದ್ಯಾರ್ಥಿಯ ದೈಹಿಕ-ಮಾನಸಿಕ ಆರೋಗ್ಯ ಸ್ಥಿತಿ:- ಬಲಗಣ್ಣು ಕಾಣಿಸುವುದಿಲ್ಲ, ಮಾನಸಿಕ ಸ್ಥಿತಿ-ಉತ್ತಮ.

ಉ) ವಿದ್ಯಾರ್ಥಿಯ ಸಾಮಾಜಿಕ, ಭಾವನಾತ್ಮಕ ಪಕ್ವತೆ ಮತ್ತು ಹೊಂದಾಣಿಕೆ:- ಉತ್ತಮ

ಊ) ವಿದ್ಯಾರ್ಥಿಯ ದೈಹಿಕ ಸವಾಲುಗಳು(ಇದ್ದಲ್ಲಿ):- ಕಣ್ಣಿನ ತೊಂದರೆ.

2. ವಿದ್ಯಾರ್ಥಿಯ ಶೈಕ್ಷಣಿಕ ಹಿನ್ನಲೆ:

ಅ) ವಿದ್ಯಾರ್ಥಿಯು ಓದುತ್ತಿರುವ ತರಗತಿ, ವಿಭಾಗ :4ನೇ ತರಗತಿ, 'ಎ'ವಿಭಾಗ

ಆ) ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯ ಮಟ್ಟ

– ಕನಿಷ್ಠ, ಸಾಧಾರಣ, ಉತ್ತಮ, ಅತ್ಯುತ್ತಮ.– ಸಾಧಾರಣ

ಇ) ವಿದ್ಯಾರ್ಥಿಯು ಓದುತ್ತಿರುವ ಶಾಲೆಯ ಪರಿಸರ, ತರಗತಿಕೋಣೆಯ ವಾತಾವರಣ, ಕಲಿಕಾ ಸಾಮಾಗ್ರಿಗಳು, ಆಟದ ಮೈದಾನ, ಇತರೆ ಭೌತಿಕ ಸೌಲಭ್ಯಗಳು,– ಉತ್ತಮ

ಈ) ಶಿಕ್ಷಕರ ಬೋಧನಾ ಪರಿಣಾಮ.– ಉತ್ತಮ

ಉ) ಶಾಲೆಯ ಶೈಕ್ಷಣಿಕ ಗುಣಮಟ್ಟ, ಶಾಲಾಶೈಕ್ಷಣಿಕ ಕಾರ್ಯಕ್ರಮಗಳು, ಶಾಲಾ ಶಿಸ್ತುನಿಯಮಗಳು,ಕಲಿಸುವ ವಿಧಾನಗಳು.– ಕಲಿಕಾ ವಿಧಾನ ಸುಧಾರಣೆ ಅಗತ್ಯವಿದೆ.

ಊ) ವಿದ್ಯಾರ್ಥಿ ಮತ್ತು ತರಗತಿ ಶಿಕ್ಷಕರು ನಡುವಿನ ಸಂಬಂಧ ಮತ್ತು ಅಂತರಕ್ರಿಯೆ– ಉತ್ತಮ. ಕೌಟಂಬಿಕ ಹಿನ್ನಲೆಯನ್ನು ವಿಚಾರಿಸಿ, ಸೂಕ್ತ ಮಾರ್ಗದರ್ಶನ ನೀಡುತ್ತಾರೆ.

ಋ) ವಿದ್ಯಾರ್ಥಿನಿಯ ಬಗ್ಗೆ ತರಗತಿ ಶಿಕ್ಷಕರ ಅಭಿಪ್ರಾಯಗಳು–

ಶಾಂತಸ್ವಭಾವದ ಹುಡುಗಿ, ಆದರೆ ಕಲಿಕೆಯಲ್ಲಿ ತಪ್ಪು. ಹಿಂದುಳಿದಿದ್ದಾಳೆ.

ಎ) ವಿದ್ಯಾರ್ಥಿಯ ಹಾಗೂ ಆತನ ಸಹಪಾಠಿಗಳ ನಡುವಿನ ಸಂಬಂಧ ಹಾಗೂ ಅಂತರಕ್ರಿಯೆ.

ಉತ್ತಮ ಸ್ನೇಹ, ವಿಶ್ವಾಸ, ಸಹಕಾರಗಳನ್ನು ಇಟ್ಟುಕೊಂಡಿದ್ದಾಳೆ. ಈಕೆಯ ಆಪ್ತಗೆಳತಿ ತೇಜಳ ಅಭಿಪ್ರಾಯ.

ಏ) ವಿದ್ಯಾರ್ಥಿಯ ಬಗ್ಗೆ ಸಹಪಾಠಿಗಳ ಅಭಿಪ್ರಾಯಗಳು:

ಈಕೆಯ ಆಪ್ತಗೆಳತಿ ತೇಜಳ ಅಭಿಪ್ರಾಯ.:– ದಿವ್ಯ ಒಳ್ಳೆಯ ಗೆಳತಿ, ನನಗೆ ಇಷ್ಟ, ಆದೆ ಓದಿನಲ್ಲಿ ಹೊಂದಿದ್ದಾಳೆ. ಅವಳು ಓದುವಂತೆ ಸಹಕರಿಸುತ್ತೇವೆ. ಮನೆಯಲ್ಲಿ ನಡೆದ ವಿಚಾರಗಳನ್ನು ಹೇಳುತ್ತಾಳೆ.

ಐ) ಶಾಲೆಯಲ್ಲಿ ನಡೆಸುವ ಸಹಪಠ್ಯ ಚಟುವಟಿಕೆಗಳು:–

ಪ್ರತಿಭಾ ಕಾರಂಜಿ, ರಸಪ್ರಶ್ನೆ, ನಾಟಕ, ಚರ್ಚೆ, ಪ್ರಬಂಧ ಬರಹ, ಕಥೆಬರೆಯುವುದು, ಹಾಡು, ನೃತ್ಯ, ಶಾಲಾ ವಾರ್ಷಿಕೋತ್ಸವ, ಕ್ರೀಡೆಗಳು.

ಒ) ಶಾಲೆಯಲ್ಲಿ ವಿದ್ಯಾರ್ಥಿಗೆ ದೊರಕುತ್ತಿರುವ ಪ್ರೋತ್ಸಾಹ ಇತ್ಯಾದಿ

ರೇಡಿಯೋ ಕ್ರಾರ್ಯಕ್ರಮದ ಮೂಲಕ ಕಲಿಕೆ, ವ್ಯಾಯಾಮ ಕಲಿಕೆ ಇಲ್ಲ.

3. ವಿದ್ಯಾರ್ಥಿಯ ಕೌಟುಂಬಿಕ ಹಿನ್ನಲೆ:

- ❖ ತಂದೆಯ ಹೆಸರು: ಲಕ್ಷ್ಮಣ
- ❖ ತಾಯಿಯ ಹೆಸರು: ಸಾವಿತ್ರಮ್ಮ
- ❖ ತಂದೆಯ ಉದ್ಯೋಗ: ಚಿಪ್ಸ್ ಮಾರಾಟ
- ❖ ತಾಯಿಯ ಉದ್ಯೋಗ: ಮನೆಗೆಲಸ
- ❖ ಪೋಷಕರಿಬ್ಬರ ಆರೋಗ್ಯ: ಉತ್ತಮ
- ❖ ಪೋಷಕರು ಮತ್ತು ವಿದ್ಯಾರ್ಥಿಯ ನಡುವಿನ ಅಂತರ್ ಕ್ರಿಯೆ: ತಂದೆ ಕಂಡರೆ ಭಯ, ತಾಯಿ ಕಂಡರೆ ತುಂಬಾ ಪ್ರೀತಿ ಇದೆ.
- ❖ ಕುಟುಂಬದ ಸಾಮಾಜಿಕ–ಆರ್ಥಿಕ ಪರಿಸ್ಥಿತಿ– ಉತ್ತಮ.
- ❖ ಪೋಷಕರ ಶಿಕ್ಷಣ ಮಟ್ಟ– ಅನಕ್ಷರಸ್ಥರು,
- ❖ ಪಾಲನೆ, ಕಾಳಜಿ– ಉತ್ತಮ
- ❖ ಶಿಕ್ಷಣದ ಬಗ್ಗೆ ಪ್ರೋತ್ಸಾಹ – ಉತ್ತಮ
- ❖ ನೆರೆಹೊರೆಯವರೊಡನೆ ಸಂಬಂಧ– ಉತ್ತಮ.

**4ನೇ ಹಂತ:** ಸಂಗ್ರಹಿಸಲಾದ ಮಾಹಿತಿಗಳ ನಿಖರತೆ ಕುರಿತಂತೆ ಬೇರೆ ಬೇರೆ ವಿಧಾನಗಳಿಂದ ಮರು ಪರಿಶೀಲನೆ ಮಾಡಿ ದೃಢಪಡಿಸಿಕೊಳ್ಳುವುದು.

- ❖ ದಿವ್ಯಳ ತರಗತಿ ಶಿಕ್ಷಕರ ಅಭಿಪ್ರಾಯ ಸಂಗ್ರಹಣೆ. ಸಂದರ್ಶನ ವಿಧಾನದಿಂದ ,ವೀಕ್ಷಣಾವಿಧಾನದಿಂದ ಅಭಿಪ್ರಾಯ ಸಂಗ್ರಹಣೆ
- ❖ ದಿವ್ಯಳ ಸ್ವ– ಅನುಭವದ ಮಾಹಿತಿ.

- ❖ ಸಹಪಾಠಿಗಳ ಮಾಹಿತಿ.
- ❖ ಎಲ್ಲಾ ಮಾಹಿತಿಗಳನ್ನು ಶೇಖರಣೆ ಮತ್ತು ಹೋಲಿಸಿ ನೋಡಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

**5ನೇ ಹಂತ:** ಸಂಗ್ರಹಿಸಿಲಾದ ಮಾಹಿತಿಗಳನ್ನು ವಿಶ್ಲೇಷಿಸಿ, ತರ್ಕಿಸಿ, ಸೂಕ್ತ ತೀರ್ಮಾನಗಳನ್ನು ಕೈಗೊಳ್ಳುವುದು.

1. ವಿದ್ಯಾರ್ಥಿಯು ದೈಹಿಕ ಸವಾಲುವುಳ್ಳ ಮಗುವಾಗಿದ್ದು ವಿದ್ಯಾರ್ಥಿಯಲ್ಲಿ ದೃಷ್ಟಿದೋಷ ಪ್ರಮುಖ ಸಮಸ್ಯೆಯಾಗಿದೆ.
2. ಈ ದೃಷ್ಟಿದೋಷಕ್ಕೆ ಮೆಳೆಗಣ್ಣು ಕಾರಣವೆಂದು ತಿಳಿದುಬಂದಿದೆ.
3. ಈ ದೃಷ್ಟಿದೋಷದಿಂದ ವಿದ್ಯಾರ್ಥಿಯು ಕಲಿಕೆಯಲ್ಲಿ ಹಿಂದುಳಿದಿದ್ದಾಳೆ. ಇದನ್ನು ಬಗೆಹರಿಸದಿದ್ದರೆ ಮುಂದೆ ಮಗುವು ಪೂರ್ಣ ಅಂಧಳಾಗಿ ಪರಿಣಮಿಸಬಹುದು.
4. 7–8 ವರ್ಷಗಳ ಒಳಗೆ ಸೂಕ್ತ ಚಿಕಿತ್ಸೆ ಕೈಗೊಂಡರೆ ಇನ್ನೊಂದು ಕಣ್ಣಿನ ದೃಷ್ಠಿ ಉಳಿಸುವುದಲ್ಲದೆ, ವ್ಯಕ್ತಿಗೆ ಬಹಳ ಉಪಯುಕ್ತವಾದ ಎರಡೂ ಕಣ್ಣಿನಿಂದ ಕಾಣುವ ಏಕದೃಷ್ಟಿಗುಣವನ್ನು ಉಳಿಸಬಹುದು.
5. ಮುಂದೆ ಆಗುವ ತೊಂದರೆಗಳನ್ನು ತಪ್ಪಿಸಬಹುದು. ಇದರಿಂದ ವಿದ್ಯಾರ್ಥಿಯನ್ನು ಕಲಿಕೆಯಲ್ಲಿ ತೊಡಗುವಂತೆ ಮಾಡಿ ಉತ್ತಮ ಫಲಿತಾಂಶವನ್ನು ಪಡೆಯಬಹುದು.
6. ಭವಿಷ್ಯವೂ ಕೂಡ ಉತ್ತಮವಾಗಿರುವುದು.

**6ನೇ ಹಂತ:** ತೀರ್ಮಾನಗಳನ್ನು ಆಧರಿಸಿ ಸೂಕ್ತ ನಿವಾರಣೋಪಾಯಗಳನ್ನು ಸಲಹೆ–ಸೂಚನೆಗಳನ್ನು ನೀಡುವುದು.

- ❖ ಮೆಳ್ಳೆಗಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸುವುದು.
- ❖ ಪೋಷಕರು ಮಗುವಿನ ಎಲ್ಲಾ ಅಂಶಗಳ ಕಡೆಗೆ ಸಂಪೂರ್ಣ ಗಮನ ನೀಡುವುದು.
- ❖ ಶಿಕ್ಷಕರು ಆದಷ್ಟು ಹೆಚ್ಚಿನ ಗಮನವನ್ನು ಈಕೆಯ ಕಡೆಗೆ ಕೊಡಬೇಕು.
- ❖ ತಂದೆ–ತಾಯಿಯನ್ನು ಕರೆಯಿಸಿ ಅವರಿಗೆ ಸರಿಯಾದ ಮಾರ್ಗದರ್ಶನ ಸೂಕ್ತಸಲಹೆಗಳನ್ನು ನೀಡಬೇಕು.
- ❖ ವಿದ್ಯಾರ್ಥಿಯಲ್ಲಿ ಆತ್ಮವಿಶ್ವಾಸ, ಧೈರ್ಯ ತುಂಬಿ ಶೈಕ್ಷಣಿಕ ಸಾಧನೆಯ ಕಡೆ ಒಲವು ಮೂಡುವಂತೆ ಮಾಡುವುದು
- ❖ ದೈಹಿಕ ದೌರ್ಬಲ್ಯಹೊಂದಿ ಉನ್ನತ ಸಾಧನೆ ಮಾಡಿದ ವ್ಯಕ್ತಿಗಳ ಪರಿಚಯ ಮಾಡುವುದು.

**7ನೇ ಹಂತ:** ಅನುಪಾಲನೆ ಮಾಡಿ ಪ್ರಗತಿಯನ್ನು ಗಮನಿಸುವುದು.

ಮಾಸಿಕವಾಗಿ ಮಗುವಿನ ಪ್ರಗತಿಯ ಬಗ್ಗೆ ಗಮನ ಹರಿಸುವುದು.

ಮೆಳ್ಳೆಗಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸುವುದು ಬಗ್ಗೆ ಮಾಹಿತಿ ಸಂಗ್ರಹಿಸುವುದು.

ಪುನಹ: ಶಾಲೆ, ಮನೆ ಇತರೆ ಸಂಬಂಧಿಸಿದ ಸ್ಥಳಗಳಿಗೆ ಭೇಟಿ ನೀಡಿ ವೀಕ್ಷಿಸಿ,ಮತ್ತೊಮ್ಮೆ ಸಮಾಲೋಚಿಸಿ ಅನುಪಾಲನೆ ಮಾಡಬೇಕಾಗುತ್ತದೆ. 3 ವಾರಗಳಿಂದ 3 ತಿಂಗಳುಗಳ ಅವಧಿಯಲ್ಲಿ ಕೈಗೊಳ್ಳಲಾಗಿದೆ.

ಅಗತ್ಯ ಬಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡಲಾಯಿತು.

**8ನೇ ಹಂತ:** ಸಮಗ್ರವಾಗಿ ವರದಿ ತಯಾರಿಸಿ ಸಲ್ಲಿಸುವುದು.

ವರದಿ ನಮೂನೆಯಲ್ಲಿ ತಯಾರಿಸಿ ಅಧ್ಯಯನ ಕೈಗೊಂಡ ಎಲ್ಲಾ ವಿವರಗಳೊಂದಿಗೆ ಸಮಗ್ರ ವರದಿಯನ್ನು ಸಲ್ಲಿಸುವುದು. ಮುಂದೆ ಸಂಶೋಧನೆ ಮಾಡುವವರಿಗೆ ಮಾರ್ಗದರ್ಶನ ನೀಡುವುದು.

5. *List any three concerns of a DIET Lecturer that could be addressed through action research.*

| | |
|---|---|
| **Implementation of Inservice Training- Lab area study** | **Smt. Sweety Kalanjali.** |
| **Impact of Teleconference on teaching-learning process** | **Smt. Sweety Kalanjali.** |
| **“School development depends on the efficiency of the SDMC”- A Study.** | **Smt. Geetha Manual** |
| **“Experimental Study about CHAITHANYA TRAINING”** | **Smt. Khamer Sultan** |
| **A Case Study about Blind student DIVYA** | **Smt. M. Sheelarani.** |